ಆ) ಇದೆ ಬೆಂಗಳೂರು ನಗರಕ್ಕೆ ಸಮೀಪದ ಹೆಸರಘಟ್ಟ ಬಳಿ 302 ಎಕರೆ ಪ್ರದೇಶದಲ್ಲಿ ಚಿತ್ರನಗರಿ ನಿರ್ಮಾಣಕ್ಕಾಗಿ ಜಮೀನನ್ನು ಮೀಸಲಿಡಲಾಗಿದೆ ಈ ಜಾಗವು ಸಧ್ಯಕ್ಕೆ ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮದ ವಶದಲ್ಲಿರುತ್ತದೆ

ಇ) ಈ ಜಾಗವನ್ನು ಮಾರಟ ಮಾಡುವ ಯಾವುದೇ ಉದ್ದೇಶವಿರುವುದಿಲ್ಲ

ಈ) ಅಧಿಕೃತವಾಗಿ ಯಾವುದೇ ಹಾಲಿವುಡ್ ಕಂಪನಿಗಳು ಈ ಕಾರ್ಯಕ್ಕೆ ಮುಂದೆ ಬಂದಿರುವುದಿಲ್ಲ

ಉ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲತ್ಯ

ರಾಜ್ಯದ ಜಿಲ್ಲಾ ಪಂಚಾಯ್ತಿ ಹಣ ದುರುಪಯೋಗ ಪ್ರಕರಣ

171 (209) ಶ್ರೀ ಸದಾನಂದಗೌಡ ಡಿ ವಿ (ಪುತ್ತೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜಿಲ್ಲಾ ಪಂಚಾಯತ್‌ಗಳಲ್ಲಿ ಹಣ ದುರುಪಯೋಗ, ಕಾಮಗಾರಿ ಅವ್ಯವಹಾರ ಮುಂತಾದ ಪ್ರಕರಣಗಳು ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಜಿಲ್ಲಾ ಪಂಚಾಯತ್‌ಗಳಲ್ಲಿ ನಡೆದಿವೆ

ಆ) ಈ ಪ್ರಕರಣದಲ್ಲಿ ದುರುಪಯೋಗವಾದ ಮೊತ್ತವೆಷ್ಟು ಕಾಮಗಾರಿವಾರು, ಜಿಲ್ಲಾವಾರು, ಅವ್ಯವಹಾರದ ಮಾಹಿತಿ ನೀಡಿ

ಇ) ಇಂತಹ ಪ್ರಕರಣಗಳಲ್ಲಿ ಉದ್ದೇಶಪೂರ್ವಕ ಮತ್ತು ಅನಗತ್ಯ ವಿಳಂಬ ಉಂಟಾಗುತ್ತಿರುವ ಸಂಗತಿ ನಿಜವೆ,

ಈ) ಇದಕ್ಕೆ ಕಾರಣವೇನು ತನಿಖಾಧಿಕಾರಿಗಳು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಈ ವ್ಯವಹಾರದಲ್ಲಿ ಶಾಮೀಲಾಗಿರುವ ಶಂಕೆ ಕಂಡುಬಂದಿದೆಯೇ

ಉ) ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು

ಊ) ಅಪರಾಧ ಎಸಗಿರುವ ಪ್ರಕರಣಗಳಲ್ಲಿ ಈವರೆಗೂ ಕ್ರಮ ಜರುಗಿಸದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ?

ಶ್ರೀ ಎಂ ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 27 ಜಿಲ್ಲಾ ಪಂಚಾಯತ್‌ಗಳಲ್ಲಿ ಅವ್ಯವಹಾರ ನಡೆದಿರುವುದು ಪತ್ತೆಯಾಗಿದೆ ಜಿಲ್ಲಾ ಪಂಚಾಯತ್‌ವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ರೂ 1470,48 ಲಕ್ಷಗಳು, (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಅವ್ಯವಹಾರಗಳು ಕಂಡುಬಂದ ತಕ್ಷಣ ಕಾಲಕಾಲಕ್ಕೆ ನಿಯಮಾನುಸಾರ ಸಂಬಂಧಿಸಿದವರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುತ್ತಿದೆ

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತಿ	ಅವ್ಯವಹಾರದ ಪ್ರಕರಣಗಳ ಸಂಖ್ಯೆ /	ಮೊತ್ತ (ಲಕ್ಷಗಳಲ್ಲಿ)
1	ಬೆಂಗಳೂರು (ನಗರ)	4	11 22
2	ಬೆಂಗಳೂರು (ಗ್ರಾ)	30	118 03
3	ಬಳ್ಳಾರಿ	11	239 28
4	ಬೆಳಗಾಂ	10	14 32
5	ಬೀದರ್	9	26 78
6	ಬಿಜಾಪುರ	12	56 23
7	ಚಿಕ್ಕಮಗಳೂರು	27	23 05
8	ಚಿತ್ರದುರ್ಗ	12	6 44
9	ದಕ್ಷಿಣ ಕನ್ನಡ	9	8 80
10	ಗುಲ್ಬರ್ಗ	20	46 76
11	ಹಾಸನ	48	48 65
12	ಕೊಡಗು	12	100 99
13	ಕೋಲಾರ	17	19 57
14	ಮಂಡ್ಯ	20	54 02
15	ಮೈಸೂರು	28	30 53
16	ರಾಯಚೂರು	9	97 02
17	ಶಿವಮೊಗ್ಗ	25	63 50
18	ತುಮಕೂರು	2	0 40
19	ಉತ್ತರ ಕನ್ನಡ	3	132 18
20	ಬಾಗಲಕೋಟೆ	9	7 84
21	ಚಾಮರಾಜನಗರ	7	86 45
22	ದಾವಣಗೆರೆ	3	104 02
23	ಗದಗ	8	42 48
24	ಹಾವೇರಿ	23	123 18
25	ಕೊಪ್ಪಳ	1	0 66
26	ಉಡುಪಿ	2	6 70
27	ಧಾರವಾಡ	3	1 32
	ಒಟ್ಟು	364	1470 48